2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ , ದಾವಣಗೆರೆ.

Spl.C.197/2024

| ಫಿರ್ಯಾದಿದಾರರು | ವಿರುದ್ಧ | ಆರೋಪಿತರು |
|---|---|---|
| ರಾಜ್ಯದ ಪರವಾಗಿ ದಾವಣಗೆರೆ ಬಡಾವಣೆ ಪೊಲೀಸ್ ಠಾಣೆ, ದಾವಣಗೆರೆ | | ಪ್ರಕಾಶ್.ಡಿ. ತಂದೆ ದುಗ್ಗಪ್ಪ, ವಯಸ್ಸು 36 ವರ್ಷ, ವಾಸಃ ನಂ.208/6 ಬಿ, 17 ನೇ ಕ್ರಾಸ್, 1 ನೇ ಮೇನ್, ಡಾಂಗ್ಯೂ ಪಾರ್ಕ್ ಮುಂಭಾಗ, ಕೆಟಿಜೆ ನಗರ, ದಾವಣಗೆರೆ |

**ದೋಷಾರೋಪಣೆ**

ನಾನು ಶ್ರೀ. ಪ್ರವೀಣ್ ಕುಮಾರ್.ಆರ್.ಎನ್., ಬಿ.ಕಾಂ ಎಲ್.ಎಲ್.ಬಿ 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು , ದಾವಣಗೆರೆ :-

ಆರೋಪಿತರಾದ- ಪ್ರಕಾಶ್.ಡಿ. ತಂದೆ ದುಗ್ಗಪ್ಪ, ವಯಸ್ಸು 36 ವರ್ಷ, ವಾಸಃ ನಂ.208/6 ಬಿ, 17 ನೇ ಕ್ರಾಸ್, 1 ನೇ ಮೇನ್, ಡಾಂಗ್ಯೂ ಪಾರ್ಕ್ ಮುಂಭಾಗ, ಕೆಟಿಜೆ ನಗರ, ದಾವಣಗೆರೆ

ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪವಿಡುತ್ತೇನೆ.

1. ಮೊದಲನೇಯದಾಗಿ, ಆರೋಪಿಯಾದ ನೀನು ಸಾಕ್ಷಿ-1 ರವರ ತಮ್ಮ ಸಾಕ್ಷಿ-6 ರವರ ಸ್ನೇಹಿತನಾಗಿದ್ದು, ಸಾಕ್ಷಿ-1 ರವರ ಮನೆಗೆ ಆಗಾಗ್ಗೆ ಬಂದು ಹೋಗಿ ಮಾಡಿಕೊಂಡಿದ್ದು, ಸಾಕ್ಷಿ-1 ರವರ ಜೊತೆಯಲ್ಲಿ ಆತ್ಮೀಯವಾಗಿದ್ದು, ಈ ಸಲುಗೆಯನ್ನು ಉಪಯೋಗಿಸಿಕೊಂಡ ಆರೋಪಿಯಾದ ನೀನು ಸಾಕ್ಷಿ-1 ರವರ ಬಳಿ ಈಗ್ಗೆ ಸುಮಾರು ಒಂದು ವರ್ಷದ ಹಿಂದೆ ತನಗೆ ಕಷ್ಟವಿದೆ ಎಂದು ಹೇಳಿ 1,50,000-00 ರೂಗಳನ್ನು ಹಾಗೂ ಬಂಗಾರದ ವಡವೆಗಳನ್ನು ಪಡೆದುಕೊಂಡಿದ್ದು, ನಂತರ ಸಾಕ್ಷಿ-1 ರವರು ಎಷ್ಟು ಕೇಳಿದರೂ ಸಹ ಹಣ ವಡವೆ ವಾಪಾಸ್ ಕೊಡದೇ ಇತ್ತೀಚೆಗೆ ಹೆದರಿಸಲು ಪ್ರಾರಂಭಿಸಿದ್ದರಿಂದ ಸಾಕ್ಷಿ-1 ರವರು ದಿಃ 12-06-2024 ರಂದು ಈ ಬಗ್ಗೆ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ನೀಡಲು ಬಂದಿದ್ದಾಗ ಇದನ್ನು ತಿಳಿದುಕೊಂಡ ಆರೋಪಿಯಾದ ನೀನು ಮಹಿಳಾ ಠಾಣೆಯ ಮುಂಭಾಗಕ್ಕೆ ಬಂದು ಅಲ್ಲಿಂದ ಸಾಕ್ಷಿ-1 ರವರನ್ನು ಕರೆದುಕೊಂಡು ಹಳೇ ಪಿಬಿ ರಸ್ತೆಯಲ್ಲಿರುವ ದರ್ಶನ್ ಗ್ರಾಂಡ್ ಲಾಡ್ಜ್ ನ ಮುಂಭಾಗಕ್ಕೆ ಕರೆದುಕೊಂಡು ಹೋದಾಗ

ಸಾಕ್ಷಿ-1 ರವರು ಅವನಿಗೆ ಹಣ ಮತ್ತು ಬಂಗಾರ ಕೊಡು ಅಂತಾ ಕೇಳಿದಾಗ ಆರೋಪಿಯಾದ ನೀನು ದರ್ಶನ್ ಲಾಡ್ಜ್ ಗೆ ಹೋಗಿ ರೂಂ ಮಾಡು ನಾನು ಹಣ ಮತ್ತು ಬಂಗಾರವನ್ನು ತೆಗೆದುಕೊಂಡು ಬರುತ್ತೇನೆ ಎಂದು ಹೇಳಿದ್ದರಿಂದ ಸಾಕ್ಷಿ-1 ರವರು ತನ್ನ ತಮ್ಮನ ಸ್ನೇಹಿತ ಎನ್ನುವ ನಂಬಿಕೆಯಿಂದ ಅದೇ ದಿನ ಮದ್ಯಾಹ್ನ ಸುಮಾರು 12-25 ಗಂಟೆಗೆ ದರ್ಶನ್ ಗ್ರ್ಯಾಂಡೆ ಲಾಡ್ಜ್ ಗೆ ಹೋಗಿ ಪ್ರಕಾಶನ ಹೆಸರಿಗೆ ರೂಂ ಮಾಡಿ ಸ್ವಲ್ಪ ಹೊತ್ತು ಅಲ್ಲಿಯೇ ಕಾಯುತ್ತಿದ್ದು, ಮದ್ಯಾಹ್ನ ಸುಮಾರು 12-43 ಗಂಟೆಗೆ ಪ್ರಕಾಶನು ಲಾಡ್ಜ್ ಗೆ ಬಂದು ರಿಸೆಪ್ಸನ್ ಬಳಿ ಬುಕ್ ನಲ್ಲಿ ಸಹಿ ಮಾಡಿ ಸಾಕ್ಷಿ-1 ರವರನ್ನು ರೂಂ ನಂ.115 ಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ ಮದ್ಯಾಹ್ನ ಸುಮಾರು 1-00 ಗಂಟೆಗೆ ಸಾಕ್ಷಿ-1 ರವರು ಆರೋಪಿಯಾದ ನಿನಗೆ ಹಣ ಮತ್ತು ಬಂಗಾರ ಕೊಡು ಅಂತಾ ಕೇಳಿದಾಗ ಆರೋಪಿಯಾದ ನೀನು ಅಲ್ಲೆ ಇದ್ದ ಬಿಯರ್ ಬಾಟಲಿಯಿಂದ ತನ್ನ ತಲೆಗೆ ಹೊಡೆದುಕೊಂಡಾಗ ಸಾಕ್ಷಿ-1 ರವರು ಬಿಡಿಸಲು ಹೋಗಿದ್ದು, ಆಗ ಆರೋಪಿಯಾದ ನೀನು ಸದರಿ ಬಿಯರ್ ಬಾಟಲಿಯ ಚೂರುಗಳಿಂದ ಸಾಕ್ಷಿ-1 ರವರ ಕೈಗಳಿಗೆ ಚುಚ್ಚಿ ಗಾಯಪಡಿಸಿದ್ದು, ಆ ಪ್ರಕಾರ ಕಲಂ 324 ರ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

2. ಎರಡನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀನು ಸಾಕ್ಷಿ-1 ರವರಿಗೆ ಬಿಯರ್ ಬಾಟಲಿಯ ಚೂರುಗಳಿಂದ ಚುಚ್ಚಿ ಗಾಯಪಡಿಸಿದ್ದಲ್ಲದೇ, ಸಾಕ್ಷಿ-1 ರವರು ಕೂಡಲೇ ರೂಂನಿಂದ ಹೊರಗೆ ಬಂದಾಗ ಸದರಿ ರೂಂನ ಬಾಗಿಲಿನ ಮುಂಭಾಗದ ಸಾರ್ವಜನಿಕ ಸ್ಥಳದಲ್ಲಿ ಆರೋಪಿಯಾದ ನೀನು ಸಾಕ್ಷಿ-1 ರವರಿಗೆ ಸಾರ್ವಜನಿಕರಿಗೆ ಕೇಳುವಂತೆ ನಿನಗೆ ನಾನು ಯಾವ ದುಡ್ಡು ಕೊಡಬೇಕು ಮಾದಿಗ ಸೂಳೇ ಮುಂಡೆ ಅಂತಾ ಜಾತಿ ನಿಂದನೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು, ತನ್ಮೂಲಕ ಅವರಿಂದ ಸಾರ್ವಜನಿಕ ಶಾಂತತ ಭಂಗ ಮಾಡುವ ರೀತಿಯಲ್ಲಿ ಪ್ರಚೋದನೆ ಮಾಡಿದ್ದು, ಆ ಪ್ರಕಾರ ಕಲಂ 504 ರ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

3. ಮೂರನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತನಾದ ನೀನು ಸಾಕ್ಷಿ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಹೊಡೆದಿದ್ದಲ್ಲದೇ, ನೀನು ಇನ್ನೊಮ್ಮೆ ನನಗೆ ದುಡ್ಡು ಬಂಗಾರ ಕೇಳಿದರೆ ನಿನ್ನನ್ನು ಮತ್ತು ನಿನ್ನ ತಮ್ಮ ಅರುಣ ಕುಮಾರ್ ನನ್ನು ಕೊಲೆ ಮಾಡುವುದಾಗಿ ಜೀವ ಬೆದರಿಕೆಯನ್ನು ಹಾಕಿದ್ದು, ಆ ಪ್ರಕಾರ ಕಲಂ 506 ರ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

4. ನಾಲ್ಕನೇಯದಾಗಿ, ಆರೋಪಿತನಾದ ನಿನಗೆ ಸಾಕ್ಷಿ-1 ರವರು ಪರಿಶಿಷ್ಟ ಜಾತಿಯ ಮಾದಿಗ ಜನಾಂಗಕ್ಕೆ ಸೇರಿದವರು ಎಂದು ತಿಳಿದಿದ್ದರೂ ಕೂಡ ಸಾರ್ವಜನಿಕವಾಗಿ ಸಾಕ್ಷಿ-1 ರವರಿಗೆ ಸಾಕ್ಷಿ-1 ರವರು ಕೂಡಲೇ ರೂಂನಿಂದ ಹೊರಗೆ ಬಂದಾಗ ಸದರಿ ರೂಂನ ಬಾಗಿಲಿನ ಮುಂಭಾಗದ ಸಾರ್ವಜನಿಕ ಸ್ಥಳದಲ್ಲಿ ಆರೋಪಿಯಾದ ನೀನು ಸಾಕ್ಷಿ-1 ರವರಿಗೆ ಸಾರ್ವಜನಿಕರಿಗೆ ಕೇಳುವಂತೆ ನಿನಗೆ ನಾನು ಯಾವ ದುಡ್ಡು ಕೊಡಬೇಕು ಮಾದಿಗ ಸೂಳೇ ಮುಂಡೆ ಅಂತಾ ಜಾತಿ ನಿಂದನೆ ಮಾಡಿದ್ದು, ಆ ಪ್ರಕಾರ ಕಲಂ 3(1)(ಆರ್), 3(1)(ಎಸ್) ಎಸ್‌ಸಿ ಎಸ್ ಟಿ (ಪಿಓಎ) ಕಾಯ್ದೆ 1989 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

5. ಕೊನೆಯದಾಗಿ, ಆರೋಪಿತನಾದ ನಿನಗೆ ಸಾಕ್ಷಿ-1 ರವರು ಪರಿಶಿಷ್ಟ ಜಾತಿಯ ಮಾದಿಗ ಜನಾಂಗಕ್ಕೆ ಸೇರಿದವರು ಎಂದು ತಿಳಿದಿದ್ದರೂ ಕೂಡ ಸಾರ್ವಜನಿಕವಾಗಿ ಜಾತಿ ನಿಂದನೆ ಮಾಡಿ, ಹಲ್ಲೆ ಮಾಡಿ, ಜೀವ ಬೆದರಿಕೆ ಹಾಕಿದ್ದು, ಆ ಪ್ರಕಾರ ಕಲಂ 3(2)(ವಿ-ಎ) ಎಸ್‌ಸಿ ಎಸ್ ಟಿ (ಪಿಓಎ) ಕಾಯ್ದೆ 1989 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

6. ಇಂದು 5 ನೇ ತಾರೀಖು ಜುಲೈ ಮಾಹೆ 2025

( ಈ ಮೇಲಿನ ದೋಷಾರೋಪಣೆಯನ್ನು ಆರೋಪಿತನಿಗೆ ಓದಲು ತಿಳಿಸಿ,ಅವರ ಹೇಳಿಕೆಯನ್ನು ನನ್ನ ಸಮಕ್ಷಮ ತೆಗೆದುಕೊಳ್ಳಲಾಯಿತು.)

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2025.07.05 14:47:53 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ದಾವಣಗೆರೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ , ದಾವಣಗೆರೆ.

Spl.C.197/2024

| ಫಿರ್ಯಾದಿದಾರರು | ವಿರುದ್ಧ | ಆರೋಪಿತರು |
|---|---|---|
| ರಾಜ್ಯದ ಪರವಾಗಿ ದಾವಣಗೆರೆ ಬಡಾವಣೆ ಪೊಲೀಸ್ ಠಾಣೆ, ದಾವಣಗೆರೆ | | ಪ್ರಕಾಶ್.ಡಿ. ತಂದೆ ದುಗ್ಗಪ್ಪ, ವಯಸ್ಸು 36 ವರ್ಷ, ವಾಸಃ ನಂ.208/6 ಬಿ, 17 ನೇ ಕ್ರಾಸ್, 1 ನೇ ಮೇನ್, ಡಾಂಗ್ಯೂ ಪಾರ್ಕ್ ಮುಂಭಾಗ, ಕೆಟಿಜೆ ನಗರ, ದಾವಣಗೆರೆ |

ಆರೋಪಿಯ ಹೇಳಿಕೆ

ಪ್ರಶ್ನೆ 1 – ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ?

ಉತ್ತರ -

ಪ್ರಶ್ನೆ 2 – ನೀನು ತಪ್ಪನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ -

(ಆರೋಪಿ ಹೇಳಿಕೆಯನ್ನು ಆತನ ಹೇಳಿಕೆ ಮೇರೆಗೆ ಮತ್ತು ನನ್ನ ಸಮಕ್ಷಮದಲ್ಲಿ ತೆಗೆದುಕೊಳ್ಳಲಾಯಿತು.)

PRAVEEN KUMAR RAGHAV NAIK
Digitally signed by PRAVEEN KUMAR RAGHAV NAIK
Date: 2025.07.05 14:48:09 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ದಾವಣಗೆರೆ.

ದಿನಾಂಕ. 05-07-2025